## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 970 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅ. ದೇವೇಗೌಡ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 14.12.2023 |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ಸಬ್ ಇನ್ಸ್‌ಪೆಕ್ಟರ್ ಹಾಗೂ ಗಾರ್ಡ್‌ಗಳ ಖಾಲಿ ಇರುವ ಹುದ್ದೆಗಳೆಷ್ಟು;</td><td>ಅಬಕಾರಿ ಇಲಾಖೆಯಲ್ಲಿ ಅಬಕಾರಿ ಉಪ ನಿರೀಕ್ಷಕರು ಹಾಗೂ ಅಬಕಾರಿ ಪೇದೆ ವೃಂದದಲ್ಲಿ ಮಂಜೂರಾದ ಹಾಗೂ ಖಾಲಿ ಹುದ್ದೆಗಳ ವಿವರ ಕೆಳಕಂಡಂತಿde.<br><br>
<table>
<tr><th rowspan="2">ಕ್ರ ಸಂ</th><th rowspan="2">ಹುದ್ದೆ</th><th rowspan="2">ಮಂಜೂರಾದ ಹುದ್ದೆಗಳು</th><th rowspan="2">ಭರ್ತಿಯಾದ ಹುದ್ದೆಗಳು</th><th colspan="2">ಖಾಲಿ ಹುದ್ದೆಗಳು</th></tr>
<tr><th>ನೇ.ನೇ.</th><th>ಬಡ್ತಿ</th></tr>
<tr><td>1</td><td>ಅಬಕಾರಿ ಉಪ ನಿರೀಕ್ಷಕರು</td><td>618</td><td>397<br>(213 + 184 ನಿಯಮ 32ರಡಿ)</td><td>268</td><td>137</td></tr>
<tr><td>2</td><td>ಅಬಕಾರಿ ಪೇದೆ</td><td>2140</td><td>1420</td><td>677</td><td>43</td></tr>
</table>
<br>ಅಬಕಾರಿ ಉಪ ನಿರೀಕ್ಷಕರ ಹುದ್ದೆಯಲ್ಲಿ ಒಟ್ಟು 405 ಹುದ್ದೆಗಳು ಖಾಲಿ ಇದ್ದು, ಸದರಿ ಖಾಲಿ ಹುದ್ದೆಗಳ ಎದುರಾಗಿ ಒಟ್ಟು 184 ಅಬಕಾರಿ ಮುಖ್ಯ ಪೇದೆ ಹಾಗೂ ಅಬಕಾರಿ ಪೇದೆ ವೃಂದದ ನೌಕರರುಗಳನ್ನು ಸರ್ಕಾರದ ಅನುಮೋದನೆಯಂತೆ ನಿಯಮ-32 ರಡಿ ಸ್ವತಂತ್ರ ಪ್ರಭಾರದಲ್ಲಿ ನೇಮಿಸಲಾಗಿರುತ್ತದೆ.</td></tr>
<tr><td>ಆ</td><td>ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದೆಯೇ; ಸಲ್ಲಿಸದಿದ್ದಲ್ಲಿ ಕಾರಣವೇನು;</td><td>ಅಬಕಾರಿ ಉಪ ನಿರೀಕ್ಷಕರು ಹಾಗೂ ಅಬಕಾರಿ ಪೇದೆ ವೃಂದಗಳಲ್ಲಿ ಈಗಾಗಲೇ ನೇಮಕಾತಿ ಪ್ರಕ್ರಿಯೆ ಜರುಗಿಸಲಾಗಿದ್ದು, ಹಾಜರಾಗದ ಹುದ್ದೆಗಳಿಗೆ ಹೆಚ್ಚುವರಿ ಆಯ್ಕೆ ಪಟ್ಟಿಗಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದ ಹಿನ್ನೆಲೆಯಲ್ಲಿ ಆಯೋಗವು ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಿದ ನಂತರ ಉಳಿದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತದೆ.</td></tr>
</table>

| | | |
|---|---|---|
| ಇ | ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು? | **ಅಬಕಾರಿ ಉಪ ನಿರೀಕ್ಷಕರು:** 2019ನೇ ಸಾಲಿನ 59 ಅಬಕಾರಿ ಉಪ ನಿರೀಕ್ಷಕರ ವೃಂದದ ನೇಮಕಾತಿಗೆ ಸಂಬಂಧಿಸಿದಂತೆ 42 ಅಭ್ಯರ್ಥಿಗಳು ಹಾಜರಾಗಿದ್ದು, 17 ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. 17 ಅಭ್ಯರ್ಥಿಗಳಲ್ಲಿ ಒಬ್ಬ ಅಭ್ಯರ್ಥಿಯ ನೇಮಕಾತಿಯನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ಮೀಸಲಿರಿಸಿ, ಉಳಿದ 16 ಅಭ್ಯರ್ಥಿಗಳ ನೇಮಕಾತಿಯನ್ನು ರದ್ದುಗೊಳಿಸಿಲಾಗಿದ್ದು, ನಂತರ ಫಾರಂ-7 ಅನ್ನು ಸಲ್ಲಿಸಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಲ್ಲಿಸುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಹೆಚ್ಚುವರಿ ಆಯ್ಕೆಪಟ್ಟಿ ಸ್ವೀಕೃತವಾದ ನಂತರದಲ್ಲಿ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.<br><br>**ಅಬಕಾರಿ ಪೇದೆ:** 2019ನೇ ಸಾಲಿನ 1003 ಅಬಕಾರಿ ಪೇದೆ ವೃಂದದ ನೇಮಕಾತಿಗೆ ಸಂಬಂಧಿಸಿದಂತೆ 254 ಅಭ್ಯರ್ಥಿಗಳು ಹಾಜರಾಗದೇ ಇರುವುದರಿಂದ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಲ್ಲಿಸುವಂತೆ ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಲಾಗಿ, ಆಯೋಗವು ದಿ:0.08.2023 ರಂದು ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದೆ. ಹೆಚ್ಚುವರಿ ಆಯ್ಕೆ ಪಟ್ಟಿಯಂತೆ ನೇಮಕಾತಿ ಪ್ರಕ್ರಿಯೆಯನ್ನು ಜಿಲ್ಲಾ ಹಂತದಲ್ಲಿ ಜರುಗಿಸಲಾಗುತ್ತಿದೆ.<br><br>ಅಬಕಾರಿ ಪೇದೆ ವೃಂದದಲ್ಲಿ ಪ್ರಸ್ತುತ ದಿನಾಂಕಕ್ಕೆ ನೇರ ನೇಮಕಾತಿ ಕೋಟಾದಡಿ 677 ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. |

**ಆಇ 83 ಇಎಲ್‌ಕ್ಯೂ 2023**

(ಆರ್.ಬಿ.ತಿಮ್ಮಾಪುರ)
ಅಬಕಾರಿ ಸಚಿವರು